'ಉಣ್ಣೇವಂತೆ ಕೈತೊಳಕೊಂಡು ಬಾ' ಅಂದಳು. ತಣಿಗೆಗೆ ಹೋಳಿಗೆ ಇಕ್ಕುತ್ತ 'ಹಬ್ಬಾವ ಬಿಡಬಾರದೂಂತವ ಮಾಡುದ್ದು, ದೊಡ್ಡವ್ವನಿಗೆ ಗ್ವತ್ತುಗಿತ್ತಾದರೆ ಊರು ತುಂಬ ಸಾರಿಕೊಂಬತ್ತಳೆ' ಎಂದು ಅವ್ವ ಪಿಸುಗುಟ್ಟಿದಳು. ಗೋಡೆಯ ಆ ಬದಿಯಲ್ಲಿ ಮಡಕೆಯ ತಳ ಕೆರಗುಟ್ಟುವ ಸದ್ದು ತೂರಿ ಬಂತು. ಗೌರಕ್ಕನ ಮಗಳಿರಬೇಕು. ಪಿಚ್ಚೆನಿಸಿ ರಾಜಣ್ಣ ಮಾತಿಲ್ಲದೆ ಉಣ್ಣುವುದನ್ನು ಮುಗಿಸಿ ಎದ್ದರೂ 'ಆ ಕಡೆ ಮನೆ'ಯ ತಳ ಕೆರೆಯುವ ಸದ್ದು ನಿಂತಿರಲಿಲ್ಲ. ಎದ್ದು ದೊಡ್ಡವ್ವನ ಮನೆ ಬಾಗಿಲಿಗೆ ಬಂದ.

ಅಂಗಳದಲ್ಲಿ ಕತ್ತಲು ಕರಗುಡುತ್ತಿತ್ತು. ಗೌರಕ್ಕನ ಕಿರಿಹುಡುಗ ಕೈಕಟ್ಟಿಕೊಂಡು ಸೀಮೆಎಣ್ಣೆ ಬುಡ್ಡಿಯ ಊದರದ ನಡುವೆ 'ಅವಾನು ಬಸವಾ' ಓದುತ್ತಿತ್ತು. ಅಲ್ಲೇ ಎದುರು ಕಂಬಕ್ಕೊರಗಿ, ಹುಡುಗ ಓದುವಂಥ ಸಂಭ್ರಮವನ್ನು, ಅವನ ಭಾವೀ ಅಮಲ್ದಾರಿಕೆಯ ಗತ್ತನ್ನು, ಕತ್ತು ಮುಚ್ಚುವ ಕಪ್ಪು ಕೋಟು, ಪ್ಯಾಂಟಿನ ಜರುಬನ್ನು ಕಣ್ಣ ತುಂಬ ತುಂಬಿಕೊಳ್ಳುತ್ತ ಗೌರಕ್ಕ ಚಿಮಣಿ ಎಣ್ಣೆಯ ಮಸಮಸುಕು ಬೆಳಕಲ್ಲಿ ಹೊಳೆಯುತ್ತಿದ್ದಳು. ಅಲ್ಲೇ ಬದಿಯಲ್ಲೇ ಎತ್ತಿಗೆ ಕಣ್ಣೆಯಿಕ್ಕಿ ಬಾನಿಗೆ ನೀರು ಸುರಿದು ವಲ್ಲಿ ಕೊಡವಿ ತಲೆಗೆ ಬಿಗಿದುಕೊಂಡು,'ಏನಮ್ಮಿ ವಲೇ ವಚ್ಚಿದಂಗಿಲ್ಲ' ಎಂದ ಅಣ್ಣಯ್ಯನ ದನಿಯಿಂದ ಕಣ್ಣೊಳಗಿನ ಕನಸೆಲ್ಲ ಒಡೆದವಳಂತೆ ಸಿಡಿದು ಬಿದ್ದು 'ಅಹ, ತಂದು ಇಳುವಿದಿಯಲ್ಲೊ ಸೂರಾ ವಾಡೆಗಟ್ಟಲೆ ದವಸವ ಬೇಸಿ ಬಡಿಯಕೆ' ಎಂದು ಗೌರಕ್ಕ ಗುಟುರುಗುಟ್ಟತೊಡಗಿದಳು.

ಇವಳ ಗುಟುರಿಗೆ ಒಗ್ಗಿಹೋಗಿದ್ದ ಅಣ್ಣಯ್ಯ ಕೂಡ ಇವತ್ತು ಉರಿದೆದ್ದು 'ಯೇ ಸುಮ್ಕಿರಮೇ' ಅಂದು ಅಬ್ಬರಿಸಿ ದಪ್‌ದಪ್ ಎಂದು ಹೆಜ್ಜೆ ಬೀಸುತ್ತಾ ಹೊಸಿಲು ದಾಟಿ ಕತ್ತಲೊಳಗೆ ಕರಗಿದ್ದನ್ನು ಗೌರಕ್ಕನ ಕಣ್ಣು ಹಿಂಬಾಲಿಸಿದಂತೆ 'ಆ ಸುಬದ್ರೀ ಮಡುಲಿಗೆ ಉರುಕಿದನೇನೋ ಮಿಂಡಗಾರ ನನಮಗಾ' ಎಂದು ಸಣ್ಣ ದನಿಯಲ್ಲಿ ಶುರು ಹಚ್ಚಿಕೊಂಡಳು. ಬಾಗಿಲಲ್ಲಿ ನಿಂತ ರಾಜಣ್ಣನ ನೆರಳು ಗೋಡೆಯ ಮೇಲೆ ಬಿದ್ದದ್ದು ಕಂಡು ಕೊರಳೆತ್ತಿ ದನಿ ಎತ್ತರಿಸಿ, ಈಗ್ಗೆ ಆರೇಳು ತಿಂಗಳಿಂದ ಊರಲ್ಲಿ ಮೊಟ್ಟಮೊದಲ ಬಾರಿಗೆ ಶುರುವಾದ ಪಾರೋತಕ್ಕನ ಮಗಳು ಚಂದ್ರಿಯ ಸೂಳೆಗಾರಿಕೆಯ ಲೀಲೆಗಳಿಂದಾಗಿ ಊರಿನ ಗಂಡುಹೈಕಳು, ಅದರೊಳಗೂ ಅಣ್ಣಯ್ಯ ಕುಲಗೆಟ್ಟು ಹೋಗಿರುವ ಹೊಸ ವರ್ತಮಾನವನ್ನು ಬಣ್ಣಿಸಲಾರಂಭಿಸಿದಳು. ಒಂದೇ ಒಂದು ವರುಷದ ಕೆಳಗೆ ರಾತ್ರೋರಾತ್ರಿ ಊರುಬಿಟ್ಟ ಪಾರೋತಕ್ಕನ ಹಿರೇಮಗಳು ಸುಶೀಲಿ ಹೇಗೋ ತುಮಕೂರು ಸೇರಿ, ಸುಡುಗಾಡು ಹೋಟಲೊಂದರಲ್ಲಿ ರೂಮು ಮಾಡಿಕೊಂಡು ಸಾವಿರಾರು ರೂಪಾಯಿ ದುಡಿದು ಮನೇ ಸಾಲವನ್ನೆಲ್ಲ ಫೈಸಲು ಮಾಡಿದ್ದೂ ಅಲ್ಲದೆ, ತೋಟತುಡಿಕೆ ಕೊಳ್ಳುವ ಲೆವೆಲ್ಲಿಗೆ ತಲುಪಿ ಅಂಗೈಯಲ್ಲಿ ಊರನ್ನು ಕುಣಿಸುವಷ್ಟು ರೊಕ್ಕ ಮಾಡಿದ್ದು ಕಂಡು ಪಾರೋತಕ್ಕ ಎರಡನೇ ಹುಡುಗಿ ಚಂದ್ರಿಯನ್ನೂ ಈ ಹೊಸ ಅಖಾಡಕ್ಕೆ ಇಳಿಸಿದ್ದಾಳೆಂಬ ವರದಿಯನ್ನು ಅರ್ಧ ಮೆಚ್ಚುಗೆ, ಅರ್ಧ ಜಿಗುಪ್ಸೆ ಬೆರೆತ ದನಿಯಲ್ಲಿ ರಾಜಣ್ಣನಿಗೆ ಒಪ್ಪಿಸತೊಡಗಿದಳು...

ಹೀಗೆ ವರದಿ ಒಪ್ಪಿಸುವ ಗಳಿಗೆಯಲ್ಲಿ ಗೌರಕ್ಕನ ಆಸೆ ತುಂಬಿದ ಕಣ್ಣುಗಳು ಅಲ್ಲೇ ಕೋಣೆಯ ಬಾಗಿಲಿಗೊರಗಿ, ಮಂಡಿಯ ಮೇಲೆ ಕೊರಳಿಟ್ಟು ಮಿಣಿಮಿಣಿ ಬೆಳಕಲ್ಲು ಮಿನುಗುತ್ತ ಕೂತ ಮಣ್ಣಿನ ಬಣ್ಣದ ಹುಡುಗಿ ಸಾವಿತ್ರಿಯ ಮೇಲೆ ಕೀಳಲಾಗದಂತೆ ನಟ್ಟಿರುವುದನ್ನು ಕಂಡು ರಾಜಣ್ಣ ನಡುಗಹತ್ತಿದ...

❖